

ಮನೆಯಿಂದಲೇ ಹೆಲ್ಮೆಟ್ ಧರಿಸಿಕೊಂಡು ಬಂದು ಡ್ರಾಪ್ ಕೋರಿಕೆ.
ಫೋಟೊ: ಎಂ.ಎಸ್. ಮಂಜುನಾಥ್

**ಹೆಲ್ಮೆಟ್ ತಯಾರಿಕೆಯಲ್ಲಿ ಸುರಕ್ಷತೆಗೆ ಎಷ್ಟು ಪ್ರಾಮುಖ್ಯತೆ ನೀಡಲಾಗುತ್ತದೆಯೋ, ಅಷ್ಟೇ ಪ್ರಾಮುಖ್ಯತೆಯನ್ನು ಅದನ್ನು ತೊಡುವವರ ಆರಾಮದಾಯಕ ಅನುಭವಕ್ಕೂ ನೀಡಲಾಗುತ್ತದೆ. ಹಾಗಿದ್ದರೆ ಹೆಚ್ಚು ಆರಾಮದಾಯಕ ಹೆಲ್ಮೆಟ್‌ನ ಆಯ್ಕೆ ಹೇಗೆ?**

ಆಘಾತ ನಿರೋಧಕ ಮತ್ತು ಶಾಖವನ್ನು ಹೀರಬಲ್ಲ ಇನ್ಸುಲೇಷನ್ ಹೆಚ್ಚುವರಿ ಪದರವನ್ನು ಈ ಹೆಲ್ಮೆಟ್‌ಗಳು ಹೊಂದಿವೆ ಹಾಗೂ ಒಳಭಾಗದಲ್ಲಿ ಫೋಮ್ ಶೆಲ್ ಹೊಂದಿವೆ.

ಎಂಟಿ: ತುಸು ವಿಲಾಸಿ ಶ್ರೇಣಿಯಲ್ಲಿ ಎಂಟಿ ಬ್ರಾಂಡ್‌ನ ಹೆಲ್ಮೆಟ್‌ಗಳು ಲಭ್ಯ. ಈ ಹೆಲ್ಮೆಟ್ ಅಮೆರಿಕ ಹಾಗೂ ಐರೋಪ್ಯ ರಾಷ್ಟ್ರಗಳ ಮಾನ್ಯತೆಯಾದ ಡಿಒಟಿ ಮತ್ತು ಇಸಿಇ ಮಾನ್ಯತೆಯನ್ನೂ ಹೊಂದಿದೆ. ಹೆಚ್ಚಿನ ಸುರಕ್ಷತೆ ನೀಡುವ ಎಂಟಿ ಬ್ರಾಂಡ್‌ನ ಹೆಲ್ಮೆಟ್‌ಗಳಲ್ಲಿ 'ಫಾಲ್ಕನ್ ವಾರಿಯರ್', 'ಎಂಟಿ ಫಾಲ್ಕನ್ ಸಿಸ್ಟಂ'ನಂತಹ ಹೆಲ್ಮೆಟ್‌ಗಳು ಲಭ್ಯ.

ಎಲ್‌ಎಸ್2: ದುಬಾರಿ ಶ್ರೇಣಿಗೆ ಸೇರುವ ಎಸ್‌ಎಲ್2 ಕಂಪನಿಯು ಮೋಟಾರು ಬೈಕ್ ಮತ್ತು ರೇಸಿಂಗ್ ಹೆಲ್ಮೆಟ್‌ಗಳನ್ನು ಸಿದ್ಧಪಡಿಸುತ್ತಿದ್ದು, ಇವುಗಳು ಭಾರತದಲ್ಲಿ ಲಭ್ಯ. ಸುರಕ್ಷತೆ, ಬಾಳಿಕೆ ಮತ್ತು ಆರಾಮ ನೀಡುವ ಹೆಲ್ಮೆಟ್‌ಗಳಿವು. ಲಾಕಿಂಗ್ ಮೆಕ್ಯಾನಿಸಂ ಕೂಡಾ ಸುಲಭದ್ದಾಗಿದೆ.

ವೆಗಾ: ಭಾರತದಲ್ಲಿ ಅತಿ ಹೆಚ್ಚು ಮಾರಾಟವಾಗುವ ಹೆಲ್ಮೆಟ್‌ಗಳಲ್ಲಿ ವೆಗಾ ಕೂಡಾ ಒಂದು. ಎಲ್ಲಾ ಆರ್ಥಿಕ ಹಿನ್ನೆಲೆಯವರೂ ಸುಲಭವಾಗಿ ಖರೀದಿಸಬಹುದಾದ ವೆಗಾ ಹೆಲ್ಮೆಟ್‌ಗಳಲ್ಲಿ ವೆಗಾ ಎಡ್ಜ್, ವೆಗಾ ಸ್ವಾರ್ಮ್ ಡ್ರಿಫ್ಟ್ ಎಸ್, ವೆಗಾ ಆಫ್ ರೋಡ್ ಡಿವಿ ಗ್ಯಾಂಗ್‌ಸ್ಟರ್, ವೆಗಾ ಕ್ರೂಸರ್, ಮೋಟಾರ್‌ಸ್ಪೋರ್ಟ್ ಹೆಲ್ಮೆಟ್‌ಗಳು ಲಭ್ಯ.

ಇವುಗಳನ್ನು ಹೊರತುಪಡಿಸಿ ಭಾರತದಲ್ಲಿ ಇನ್ನೂ ಹಲವು ಹೆಲ್ಮೆಟ್ ತಯಾರಿಕಾ ಕಂಪೆನಿಗಳು ಲಭ್ಯ ಇವೆ. ಆದರೆ ಸುರಕ್ಷತೆ ಮತ್ತು ಆರಾಮ ಎನಿಸುವ ಹೆಲ್ಮೆಟ್ ಆಯ್ಕೆ ಸವಾರರದ್ದು. ಬ್ರಾಂಡೆಡ್ ಹೆಲ್ಮೆಟ್ ಖರೀದಿ ಮಾಡಿದಲ್ಲಿ ಗುಣಮಟ್ಟದ ಖಾತ್ರಿ ಇರುತ್ತದೆ. ಅಪಘಾತದ ಸಂದರ್ಭದಲ್ಲಿ ತಲೆ ಹಾಗೂ ಮುಖಕ್ಕೆ ಗರಿಷ್ಠ ರಕ್ಷಣೆ ಇವು ನೀಡುವ ಸಾಧ್ಯತೆ ಹೆಚ್ಚು. ದೀರ್ಘ ಬಾಳಿಕೆ ಮತ್ತು ಕನಿಷ್ಠ ಸವಕಳಿ ಇವುಗಳದ್ದಾಗಿರುತ್ತದೆ.

ನಿರ್ದಿಷ್ಟ ಮಾನದಂಡಗಳು ಹಾಗೂ ಪ್ರಮಾಣಪತ್ರಗಳನ್ನು ಹೊಂದಿರುವ ಹೆಲ್ಮೆಟ್ ಧರಿಸುವುದರಿಂದ ಅನಗ್ಯ ದಂಡ ಕಟ್ಟುವುದನ್ನು ತಪ್ಪಿಸಬಹುದು.

## ಹೆಲ್ಮೆಟ್ ಧರಿಸದಿದ್ದರೆ ದಂಡ ಎಷ್ಟು?

2019ರಲ್ಲಿ ತಿದ್ದುಪಡಿಯಾದ ಮೋಟಾರು ವಾಹನ ಕಾಯ್ದೆ 1988ರ ಸೆಕ್ಷನ್ 129ರ ಅನ್ವಯ ದ್ವಿಚಕ್ರ ವಾಹನದಲ್ಲಿ ಪ್ರಯಾಣಿಸುವ 4 ವರ್ಷ ಮೇಲ್ಪಟ್ಟವರು ಹೆಲ್ಮೆಟ್ ಧರಿಸುವುದು ಕಡ್ಡಾಯ. ಹೀಗೆ ಧರಿಸುವ ಹೆಲ್ಮೆಟ್ ಹೆಚ್ಚು ಸುರಕ್ಷತೆ ಮತ್ತು ಆರಾಮ ನೀಡುವಂತದ್ದಾಗಿರಬೇಕು; ಅಪಘಾತ ಸಂದರ್ಭದಲ್ಲಿ ಗರಿಷ್ಠ ರಕ್ಷಣೆ ನೀಡುವಂತಿರಬೇಕು.

ಒಂದೊಮ್ಮೆ ಈ ಕಾಯ್ದೆ ಉಲ್ಲಂಘಿಸಿದಲ್ಲಿ ಕಾಯ್ದೆ 194ಡಿ ಸೆಕ್ಷನ್ ಅಡಿಯಲ್ಲಿ ₹1000 ದಂಡ ಮತ್ತು 3 ತಿಂಗಳ ಕಾಲ ಚಾಲನಾ ಪರವಾನಗಿಯನ್ನು ಅಮಾನತಿನಲ್ಲಿ ಇಡಬಹುದಾಗಿದೆ.

## ಹೆಲ್ಮೆಟ್ ಬದಲಾವಣೆ ಯಾವಾಗ?

ವಾಹನಗಳ ಎಲ್ಲಾ ಬಿಡಿಭಾಗಗಳಂತೆ ಹೆಲ್ಮೆಟ್ ಬಳಕೆಗೂ ನಿರ್ದಿಷ್ಟ ಕಾಲಾವಧಿ ಇದೆ. ಹೆಲ್ಮೆಟ್ ತಯಾರಕರ ಪ್ರಕಾರ ಪ್ರತಿ 5 ವರ್ಷಕ್ಕೊಮ್ಮೆ ಹೆಲ್ಮೆಟ್ ಬದಲಾಯಿಸುವುದು ಉತ್ತಮ ಎಂದೆನ್ನಲಾಗಿದೆ. ಜತೆಗೆ ಅಪಘಾತ ಸಂಭವಿಸಿದ್ದರೆ, ಅಂಥ ಹೆಲ್ಮೆಟ್‌ಗಳನ್ನು ಬದಲಿಸಿ ಹೊಸ ಹೆಲ್ಮೆಟ್ ಬಳಸುವುದು ಸೂಕ್ತ.

ಹಲವು ಬಾರಿ ಸಣ್ಣಪುಟ್ಟ ಅಪಘಾತಗಳ ಸಂದರ್ಭದಲ್ಲಿ ಹೆಲ್ಮೆಟ್ ಹೊರಭಾಗದಲ್ಲಿ ಹೆಚ್ಚು ಹಾನಿಯಾಗಿರದಿದ್ದರೆ ಒಳಭಾಗದ ಪ್ಯಾಡಿಂಗ್‌ಗೆ ಒಂದಷ್ಟು ಹಾನಿಯಾಗಿರುತ್ತದೆ. ಇಲ್ಲವೇ ಅವುಗಳು ಜರಿದಿರುತ್ತವೆ. ಇವು ಭವಿಷ್ಯದಲ್ಲಿ ನಿರೀಕ್ಷಿಸಿದಷ್ಟು ಸುರಕ್ಷತೆ ನೀಡದಿರಬಹುದು.

ಜಾಗತಿಕ ಮಟ್ಟಕ್ಕೆ ಒಟ್ಟು ರಸ್ತೆ ಅಪಘಾತದಲ್ಲಿ ಭಾರತದಲ್ಲಿ ಸಂಭವಿಸುವ ಅಪಘಾತಗಳ ಸಂಖ್ಯೆ ಶೇ 11ರಷ್ಟು. ಈ ಪ್ರಮಾಣ ಶೇ 2.3ರಷ್ಟು ಏರುಗತಿಯಲ್ಲಿರುವುದು ಆಘಾತಕಾರಿ.

'ವಿಶ್ವ ಆರೋಗ್ಯ ಸಂಸ್ಥೆ'ಯ ವರದಿ ಪ್ರಕಾರ ರಸ್ತೆ ಅಪಘಾತದಲ್ಲಿ 5ರಿಂದ 29ವರ್ಷದೊಳಗಿನವರು ಮೃತಪಟ್ಟವರೇ ಹೆಚ್ಚು. ಅದರಲ್ಲೂ ಆರ್ಥಿಕವಾಗಿ ದುರ್ಬಲ ರಾಷ್ಟ್ರಗಳಾದ ಆಫ್ರಿಕಾ ಮತ್ತು ಆಗ್ನೇಯ ಏಷ್ಯಾ ರಾಷ್ಟ್ರಗಳಲ್ಲಿ ಅಪಘಾತ ಪ್ರಮಾಣಗಳು ಹೆಚ್ಚು. ಜಾಗತಿಕ ಅಂಕಿಸಂಖ್ಯೆಗೆ ಹೋಲಿಸಿದಲ್ಲಿ ಈ ಭಾಗಗಳಲ್ಲಿ ಅಪಘಾತ ಪ್ರಮಾಣ, ಪ್ರತಿ ಒಂದು ಲಕ್ಷ ಜನಸಂಖ್ಯೆಗೆ 26.6ರಷ್ಟು ಜನ ಮೃತಪಡುತ್ತಿದ್ದಾರೆ. ಹಾಗೆಯೇ ಆರ್ಥಿಕವಾಗಿ ಸದೃಢ ರಾಷ್ಟ್ರಗಳಲ್ಲಿ ಪ್ರತಿ ಒಂದು ಲಕ್ಷ ಜನಸಂಖ್ಯೆಗೆ 15.6ರಷ್ಟಿದೆ. ಆದರೆ ಐರೋಪ್ಯ ರಾಷ್ಟ್ರಗಳಲ್ಲಿ ಈ ಪ್ರಮಾಣ ಅತ್ಯಂತ 9.3ರಷ್ಟು.

ಬೈಕ್ ಚಾಲನೆ ಮಾಡುವ ಪ್ರತಿಯೊಬ್ಬರೂ ಗಮನದಲ್ಲಿಟ್ಟುಕೊಳ್ಳಬೇಕಾದ ಒಂದು ಸಂಗತಿ ಎಂದರೆ, ನಮ್ಮ ಸುರಕ್ಷತೆ ನಮ್ಮ ಕೈಯಲ್ಲೇ ಇರುತ್ತದೆ. ಅದರಲ್ಲೂ ನಮ್ಮೊಂದಿಗೆ ಪ್ರಯಾಣಿಕರು ಇದ್ದಲ್ಲಿ ಅವರು ಹೆಲ್ಮೆಟ್ ಧರಿಸದಿದ್ದರೆ ಕರೆದುಕೊಂಡು ಹೋಗುವ ಗೋಜಿಗೆ ಹೋಗದಿರುವುದು ಉತ್ತಮ. ಯಾವುದೇ ಅವಘಡದಿಂದ ಚೇತರಿಸಿಕೊಳ್ಳುವುದಕ್ಕಿಂತ, ಅದು ಸಂಭವಿಸದಂತೆ ತಡೆಯುವುದು ಮುಖ್ಯ. ಹೀಗಾಗಿ ಪ್ರತಿಯೊಬ್ಬ ದ್ವಿಚಕ್ರ ವಾಹನ ಸವಾರರು ಹೆಲ್ಮೆಟ್ ಧರಿಸುವುದರ ಜತೆಗೆ, ತಮ್ಮೊಂದಿಗೆ ಪ್ರಯಾಣಿಸುವವರಿಗೂ ಹೆಲ್ಮೆಟ್ ಧರಿಸಿ ಪ್ರಯಾಣಿಸುವಂತೆ ತಿಳಿಸಬೇಕು.

ಜವಾಬ್ದಾರಿಯುತ ನಾಗರಿಕರಾಗಿ ಹೆಲ್ಮೆಟ್ ಧರಿಸುವುದು ನಮ್ಮ ಹೊಣೆಗಾರಿಕೆ ಎನ್ನುವುದನ್ನು ದ್ವಿಚಕ್ರ ವಾಹನ ಸವಾರರು ತಿಳಿಯಬೇಕು. ನಮ್ಮ ಬಂಧುಮಿತ್ರರಲ್ಲಿ ಯಾರಾದರೂ ಹೆಲ್ಮೆಟ್ ಧರಿಸದಿದ್ದರೆ, ಅವರ ಮೇಲೆ ಒತ್ತಡ ಹೇರಿ ಹೆಲ್ಮೆಟ್ ಧರಿಸುವಂತೆ ಮಾಡಬೇಕು. ಹೆಲ್ಮೆಟ್ ಧರಿಸುವುದು ಕುಟುಂಬದ ಬಗೆಗಿನ ನಮ್ಮ ಪ್ರೀತಿಯ ಅಭಿವ್ಯಕ್ತಿ ಆಗಿರುವಂತೆಯೇ, ಹೆಲ್ಮೆಟ್ ಧರಿಸುವಂತೆ ಒತ್ತಾಯಿಸುವುದು ಕೂಡ ಪ್ರೇಮ ಮತ್ತು ಕಾಳಜಿಯ ವ್ಯಕ್ತರೂಪವಾಗಿದೆ.

ಪ್ರತಿಕ್ರಿಯಿಸಿ: feedback@sudha.co.in